2ND SEPTEMBER 1993

ಕರ್ನಾಟಕ ವಿಧಾನ ಸಭೆ

ಗುರುವಾರ 2ನೇ ಸೆಪ್ಟೆಂಬರ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.05 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು: (ಶ್ರೀ ವಿ.ಎಸ್ ಕೌಜಲಗಿಏಅವರು)

ಪೀಠವನ್ನು ಅಲಂಕರಿಸಿದ್ದರು

-:0:-

ವಿಷಯ : - ಅವಿಶ್ವಾಸ ನಿರ್ಣಯವನ್ನು ಮಂಡಿಸಿರುವುದರಿಂದ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬಾರದೆಂಬ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಶಿಕಾರಿಪುರ) : - ಮಾನ್ಯ ಅಧ್ಯಕ್ಷರೇ, ಸಭೆಯ ಆರಂಭದಲ್ಲೇ ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ. ಏನೆಂದರೆ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಾಗ ಒಂದು ಕ್ಷಣ ಸಹ ಇವರು ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ಸಾಧ್ಯವಿಲ್ಲ. ತಾವು ಇದಕ್ಕೆ ಅವಕಾಶ ಕೊಟ್ಟ ಮೇಲೆ ಪ್ರೊಸೀಜರ್ ಪ್ರಕಾರ ಯಾವುದೇ ಕಾರಣಕ್ಕೂ ಸಹ ಪ್ರಶ್ನೋತ್ತರ ವಿಷಯವನ್ನು ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ದಯಮಾಡಿ ಹೊಸ ಪದ್ಧತಿಯನ್ನು ಹಾಕುವುದು ಬೇಡ. ಹಿಂದೆ ಯಾವುದೇ ಸಂದರ್ಭದಲ್ಲೂ ಸಹ ಅವಿಶ್ವಾಸ ನಿರ್ಣಯವನ್ನು ಚರ್ಚೆಗೆ ತೆಗೆದುಕೊಂಡ ಮೇಲೆ ಈ ರೀತಿ ಪ್ರಶ್ನೋತ್ತರ ಕಾಲಕ್ಕೆ ಅವಕಾಶ ಮಾಡಿಕೊಟ್ಟಂತಹ ಉದಾಹರಣೆಗಳು ಇಲ್ಲ. ಸರ್ಕಾರ ಒಂದು ಕ್ಷಣ ಕೂಡ ಅಧಿಕಾರದಲ್ಲಿ ಮುಂದುವರೆಯುವ ನೈತಿಕ ಹಕ್ಕನ್ನು ಕಳೆದುಕೊಂಡಿದೆ. ಇವರು ಅಧಿಕಾರವನ್ನು ಬಿಟ್ಟು ತೊಲಗಬೇಕು. ದಯಮಾಡಿ ಪ್ರಶ್ನೋತ್ತರ ಅವಧಿಯನ್ನು ಇಂದು ತಂದಿದ್ದರೂ ಸಹ ಅದನ್ನು ಬದಿಗೊತ್ತಿ ನೇರವಾಗಿ ತಾವು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ(ತೀರ್ಥಹಳ್ಳಿ) : - ಮಾನ್ಯ ಅಧ್ಯಕ್ಷರೇ, ಅವಿಶ್ವಾಸ ನಿರ್ಣಯ ಮಂತ್ರಿ ಮಂಡಲದ ಮೇಲೆ, ಸರ್ಕಾರದ ಮೇಲೆ ಅಲ್ಲ. ಆದುದರಿಂದ ಪ್ರಶ್ನೋತ್ತರ ಕೈ ಬಿಟ್ಟರೆ ಕೆಲಸಕ್ಕೆ

ಧಕ್ಕೆಯಾಗುವುದರ ಜೊತೆಗೆ ನಮ್ಮ ಶಾಸನಸಭಾ ಸದಸ್ಯರ ಪ್ರಶ್ನೋತ್ತರ ಹಕ್ಕನ್ನು ಮೊಟಕುಗೊಳಿಸುವುದು ಸರಿಯಲ್ಲವೆಂದು ಹೇಳುತ್ತಾ ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗುತ್ತದೆ ಮಂತ್ರಿಮಂಡಲದ ಮೇಲೆ ವಿಶ್ವಾಸ ಇದೆಯೋ ಇಲ್ಲವೋ ಅದು ಉಳಿದ ವಿಚಾರ; ಆದುದರಿಂದ ಪ್ರಶ್ನೋತ್ತರ ವಿಷಯವನ್ನು ತೆಗೆದುಹಾಕುವಂಥಾದ್ದು ಸರ್ಕಾರದ ಕೆಲಸಕ್ಕೆ ಮತ್ತು ನಾವು ಕಳುಹಿಸಿದಂತಹ ಪ್ರಶ್ನೆಗಳಿಗೆ ಬರತಕ್ಕ ಉತ್ತರಗಳಿಗೆ ಬಾಧಕವಾಗುತ್ತದೆ ಎಂಬ ದೃಷ್ಟಿಯಿಂದ ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಈ ಕಡೆಯವರ ನಿಲುವನ್ನು ನಾನು ಪ್ರತಿಭಟನೆ ಮಾಡುತ್ತೇನೆ. ಬಹುಶಃ ಇದು ವಿರೋಧಪಕ್ಷಗಳಿಗೆ ಅಪಮಾನ ಮಾಡುವಂತಹ ಸಂಗತಿ ಹಾಗೂ ಆಡಳಿತ ಪಕ್ಷದವರಿಗೆ ಕೈ ಜೋಡಿಸುವಂತಹ ಪದ್ಧತಿ ಇದಾಗುತ್ತದೆ. ಅವರ ಈ ನಿಲುವನ್ನು ಪ್ರತಿಭಟನೆ ಮಾಡುತ್ತೇನೆ, ಏಕೆಂದರೆ ಮಾನ್ಯ ಚಂದ್ರೇಗೌಡರು ತಮ್ಮ ಸ್ಥಾನದಲ್ಲಿ ಕುಳಿತವರು; ಮಾನ್ಯ ಚಂದ್ರೇಗೌಡರಿಗೆ ಈ ರೀತಿ ಸ್ವಾತಂತ್ರ್ಯ ಇದೆ; ಅವರು ಹಿರಿಯ ಸದಸ್ಯರೂ ಕೂಡ ಆಗಿದ್ದಾರೆ. ಆದರೆ ಹಿಂದೆ ಯಾವುದಾದರೂ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯವನ್ನು ಈ ಮನೆಯಲ್ಲಿ ಮಂಡನೆ ಮಾಡಿ ಆದರ ಮೇಲೆ ಚರ್ಚೆ ಪ್ರಾರಂಭವಾದಮೇಲೆ ಪ್ರಶ್ನೋತ್ತರವನ್ನು ತೆಗೆದುಕೊಂಡಂತಹ ಯಾವುದಾದರೂ ಉದಾಹರಣೆ ಇದೆಯೇ? ದಯಮಾಡಿ ಇದ್ದರೆ ತಾವು ತೆಗೆದುನೋಡಿ. ಈ ಹೊಸ ಪದ್ಧತಿಯನ್ನು ಹಾಕುವುದು ಬೇಡ. ತಾವು ಅವಕಾಶ ಮಾಡಿಕೊಡುವುದಾದರೆ ನನ್ನದೇನೂ ಅಭ್ಯಂತರವಿಲ್ಲ. ಇಲ್ಲಿ ಕೆಲವು ಸತ್‌ಸಂಪ್ರದಾಯಗಳನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಬಹುಶಃ ಮಾನ್ಯ ಚಂದ್ರೇಗೌಡರು ಹಿರಿಯರಾಗಿ ಈ ಮಾತುಗಳನ್ನು ಹೇಳವಂತಾದ್ದು ಎಷ್ಟರಮಟ್ಟಿಗೆ ಸೂಕ್ತ ಎಂದು ನನಗೆ ಗೊತ್ತಾಗುತ್ತಿಲ್ಲ. ಇದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ನನ್ನ ವಿರೋಧ ಇಲ್ಲ. ಆದರೆ ಈ ಒಂದು ವಿಚಾರವನ್ನು ಪ್ರತಿಭಟಿಸಿ ನಾನು ಅನಿವಾರ್ಯವಾಗಿ ಹೊರಗೆ ಹೋಗಬೇಕಾಗುತ್ತದೆ. ಈ ಪ್ರತಿಭಟನೆಯನ್ನು ತಾವು ಗಮನಕ್ಕೆ ತೆಗೆದುಕೊಳ್ಳದಿದ್ದರೆ ಸದಸ್ಯರ ಹಕ್ಕನ್ನು ತಾವು ಉಲ್ಲಂಘನೆ ಮಾಡಿದ ಹಾಗೆ ಆಗುತ್ತದೆ. ನಿನ್ನೆ ಅವಿಶ್ವಾಸ ನಿರ್ಣಯ ಮಂಡನೆಯಾಗಿರುವುದರಿಂದ ದಯಮಾಡಿ ತಾವು ಇದನ್ನು ಇವತ್ತು ಚರ್ಚೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು :- ಸರ್ಕಾರದವರು ಏನು ಹೇಳುತ್ತಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಸರ್ಕಾರ ಎಲ್ಲಿದೆ ಸ್ವಾಮಿ? ಸರ್ಕಾರ ಇಲ್ಲ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ :- ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಎತ್ತಿರತಕ್ಕಂತಹ ಮೂಲಭೂತವಾದಂತಹ ಪ್ರಶ್ನೆಗೆ ನಾನು ಉತ್ತರ ಹೇಳುವುದಾದರೆ, ನಮ್ಮ ಕಾಲದಲ್ಲಿ ನಾನು ಅಲ್ಲಿ ಕುಳಿತಿದ್ದಾಗಲೂ(ಸರ್ಕಾರದಲ್ಲಿ) ಇಲ್ಲಿ ಕುಳಿತಿದ್ದಾಗಲೂ (ವಿರೋಧ ಪಕ್ಷದಲ್ಲಿ) ಮತ್ತು ಅಲ್ಲಿ ಕುಳಿತಿದ್ದಾಗಲೂ(ಸಭಾಧ್ಯಕ್ಷರಾಗಿ) ನಡೆದಂತಹ ಪ್ರಕ್ರಿಯೆಗಳನ್ನು ನೆನಪು ಮಾಡಿಕೊಂಡು ನಾನು ಹೇಳಿದೆ. ಅವರು ಒಂದು ಆರೋಪ ಮಾಡಿದರು, ಏನೆಂದರೆ, ನಾವು ಸರ್ಕಾರದ ಜೊತೆಗೆ ಶಾಮೀಲಾಗಿದ್ದಾರೆ, ಇದನ್ನು ನಾವು ಪ್ರತಿಭಟನೆ ಮಾಡುತ್ತೇವೆ ಎಂದು. ಇವುಗಳಿಗೆ ಕಾರಣಗಳು ಇಲ್ಲ. ಈ ಹಿಂದೆ ಇದೇ ಸರ್ಕಾರ, ಇದೇ ಮಂತ್ರಿಮಂಡಲದ ವಿರುದ್ಧ ನಾವೇ ಅವಿಶ್ವಾಸ ನಿರ್ಣಯವನ್ನು

ಮಂಡನೆ ಮಾಡಿದ್ದೇವೆ. ಆ ಸಮಯದಲ್ಲೂ ಪ್ರಶ್ನೋತ್ತರ ಆದಮೇಲೆ ಆ ಚರ್ಚೆಯನ್ನು ಮುಂದುವರಿಸಿದ್ದೇವೆ. ನಾನು ಆದಕ್ಕಾಗಿ ಎರಡು ಅಂಶಗಳನ್ನು ಹೇಳುತ್ತೇನೆ. ಸರ್ಕಾರ ಬೇರೆ, ಮಂತ್ರಿಮಂಡಲ ಬೇರೆ. ಮಂತ್ರಿಮಂಡಲ ಅಶಾಶ್ವತವಾದುದು, ತಾತ್ಕಾಲಿಕವಾದುದು. ಆದರೆ ಸರ್ಕಾರ ಶಾಶ್ವತವಾದುದು. ನಾವು ಇಲ್ಲಿಗೆ ಬರದಿರತಕ್ಕಂಥಾದ್ದು ಸರ್ಕಾರದಿಂದ ಈ ರಾಜ್ಯದ ಜನರಿಗೆ ಬೇಕಾಗಿರತಕ್ಕಂತಹ ಸಮಸ್ಯೆಗಳ ಪರಿಹಾರಕ್ಕಾಗಿ. ಪ್ರಶ್ನೋತ್ತರವನ್ನು ಆದಕ್ಕಾಗಿ ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ನಿರೀಕ್ಷಿತ ಉತ್ತರಗಳನ್ನು ಸರ್ಕಾರದಿಂದ ಪಡೆಯುತ್ತೇವೆ. ಸರ್ಕಾರ ನಡೆಸತಕ್ಕಂತಹ ಮಂತ್ರಿಮಂಡಲದ ಮೇಲೆ ವಿಶ್ವಾಸ ಇದೆಯೇ ಇಲ್ಲವೇ ಎನ್ನುವುದನ್ನು ಈ ಸದನ ತೀರ್ಮಾನ ಮಾಡುತ್ತದೆ. ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಆದಕ್ಕಾಗಿ ನಮ್ಮ ನೋಟೀಸ್‌ನಲ್ಲಿ ಕೂಡ ಈ ಸದನದ ಮಾನ್ಯ ವೀರಪ್ಪಮೊಯಿಲಿಯವರ ನೇತೃತ್ವದ ಮಂತ್ರಿಮಂಡಲದಲ್ಲಿ ವಿಶ್ವಾಸ ಇಲ್ಲ ಎನ್ನುವಂತಹದ್ದನ್ನು ಬರೆದಿದ್ದೇವೆಯೇ ಹೊರತು ಸರ್ಕಾರದ ವಿರುದ್ಧ ಎಂದು ಅಲ್ಲ. ಆ ಕಾರಣ ನಾನು ಹಿಂದೆ ಇಲ್ಲಿ ವಿರೋಧ ಪಕ್ಷದ ನಾಯಕನಾಗಿ ಕೆಲಸ ಮಾಡುವ ಕಾಲದಲ್ಲೂ ಕೂಡ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಾಗ ಪ್ರಶ್ನೋತ್ತರಗಳು ನಡೆದಿವೆ. ಇದು ನನ್ನ ನೆನಪಿನಲ್ಲಿರತಕ್ಕದ್ದು. ತಪ್ಪು ಆದರೆ ನಾನು ರೆಕಾರ್ಡನ್ನು ಸರಿಪಡಿಸಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. ಪ್ರಶ್ನೋತ್ತರಗಳು ನಡೆದು ನಂತರ ಇದರ ಚರ್ಚೆ ಮುಂದುವರೆಯಲಿ. ಪ್ರಶ್ನೋತ್ತರವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದೆನೇ ಹೊರತು ನಾನು ಸರ್ಕಾರದ ಪರ, ವಿರುದ್ಧ ಅಲ್ಲ. ನಾವು ಮಂತ್ರಿಮಂಡಲಕ್ಕೆ ವಿರುದ್ಧವಾಗಿದ್ದೇವೆ, ಸರ್ಕಾರಕ್ಕೆ ವಿರುದ್ಧ ಅಲ್ಲ.

ಶ್ರೀ ಕರಿಯಣ್ಣ(ಹೊಳೆಹೊನ್ನೂರು) :- ಮಾನ್ಯ ಅಧ್ಯಕ್ಷರೇ, ನಾನು ಅಷ್ಯೂರೆನ್ಸ್ ಕಮಿಟಿ ಛೇರ್‌ಮನ್ ಆಗಿದ್ದೇನೆ. ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ 1972 ಹಾಗೂ 1985ರಿಂದಲೂ ಈ ಸರ್ಕಾರದಲ್ಲಿ ಸದಸ್ಯರುಗಳು ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಸರ್ಕಾರದ ಆಶ್ವಾಸನೆ ಕೊಟ್ಟಿರತಕ್ಕಂಥಾದ್ದನ್ನು ಯಾವ ರೀತಿ ಕಾರ್ಯಗತಗೊಳಿಸಿದ್ದಾರೆ ಎನ್ನುವುದನ್ನು ನಾವು ಪರಿಶೀಲನೆ ಮಾಡಿ ಅದನ್ನೆಲ್ಲಾ ಕಾರ್ಯಗತಗೊಳಿಸುವುದಕ್ಕೆ ಅಲ್ಲಿ ವ್ಯವಸ್ಥಿತವಾಗಿ ಕೆಲಸ ಮಾಡಿದ್ದೇವೆ. ಹಾಗಾಗಿ ಇವತ್ತು ಈ ಪ್ರಶ್ನೆಗಳನ್ನು ಕೇಳತಕ್ಕಂಥಾದ್ದು ಸರ್ಕಾರದಿಂದ ಆಶ್ವಾಸನೆಯನ್ನು ಪಡೆಯತಕ್ಕಂಥದ್ದಕ್ಕೆ ಸಹಾಯಕವಾಗುತ್ತದೆ. ಸರ್ಕಾರ ತನ್ನ ಕೆಲಸವನ್ನು ಸರಿಯಾಗಿ ಮಾಡಿಕೊಂಡು ಹೋಗುವುದಕ್ಕೆ ಈ ಪ್ರಶ್ನೆಗಳನ್ನು ಹಾಕುತ್ತೇವೆ. ಈ ಹಿನ್ನೆಲೆಯಲ್ಲಿ ಪ್ರಶ್ನೋತ್ತರ ವೇಳೆ ಬಹಳ ಅನುಕೂಲಕರವಾಗಿರುತ್ತದೆ. ಆದುದರಿಂದ ಪ್ರಶ್ನೆಗಳನ್ನು ತಾವು ತೆಗೆದುಕೊಳ್ಳಬೇಕು ಮತ್ತು ಇದಕ್ಕೆ ಆದ್ಯತೆ ಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ಈಗ ಪ್ರಶ್ನೋತ್ತರ. ಶ್ರೀ ಡಿ.ಬಿ.ಚಂದ್ರೇಗೌಡರು ತಮ್ಮ ಪ್ರಶ್ನೆಯನ್ನು ಕೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ :- ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರ, ವರ್ತನೆಯನ್ನು ನಾನು ಪ್ರತಿಭಟನೆ ಮಾಡಿ ಈ ಪ್ರಜಾತಂತ್ರ ವ್ಯವಸ್ಥೆಗೇ ಇದು ಅಪಮಾನ ತರತಕ್ಕಂಥ ಸಂಗತಿ ಎಂದು ಹೇಳುತ್ತಿದ್ದೇನೆ. ಸರ್ಕಾರ ಬೇರೆ, ಮಂತ್ರಿಮಂಡಲ ಬೇರೆ ಅಲ್ಲ. ಇದು ಬಹಳ ಸ್ಪಷ್ಟವಾಗಿದೆ ಇವರು ಸರ್ಕಾರದ ಜೊತೆಯಲ್ಲಿ ಬಹುಶಃ ಒಂದು ರೀತಿ ಕೈಜೋಡಿಸುತ್ತಾರೆ, ಎನ್ನುವ ಭಾವನೆ ಎಲ್ಲರಲ್ಲೂ

ಬರುವಂತಾದ್ದು ಆಗುತ್ತದೆ. ಒಂದು ಅಪರಾಧಿ ಸ್ಥಾನದಲ್ಲಿ ನಿಲ್ಲೋದಕ್ಕೆ ಇವರು ಸಿದ್ಧ ಇದ್ದರೆ ನನ್ನದು ಏನೂ ವಿರೋಧವಿಲ್ಲ. ತಾವು ಪ್ರಶ್ನೋತ್ತರವನ್ನು ಮುಂದುವರಿಸಬಹುದು. ಈ ನೀತಿಯನ್ನು ಪ್ರತಿಭಟನೆ ಮಾಡಿ, ವಿರೋಧ ಪಕ್ಷದವರ ಅಭಿಪ್ರಾಯ ಏನು ಇದೆ, ಇದು ಪ್ರಜಾತಂತ್ರದ ಸತ್ ಸಂಪ್ರದಾಯಕ್ಕೆ ವಿರೋಧವಾಗಿರುವುದನ್ನು ಪ್ರತಿಭಟಿಸಿ ಪ್ರಶ್ನೋತ್ತರ ಅವಧಿಯನ್ನು ಮುಂದುವರಿಸಬಾರದೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಯಡಿಯೂರಪ್ಪನವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ(ಕನಕಪುರ) :- ಮಾನ್ಯ ಅಧ್ಯಕ್ಷರೇ, ತಾವು ವಿರೋಧಪಕ್ಷವನ್ನು ರೆಕಗ್‌ನೈಸ್ ಮಾಡಿ ನಾನು ಉಪನಾಯಕ ಅಂತ ಹೇಳಿ ನನ್ನ ಪಕ್ಷದ ವತಿಯಿಂದ ಸಂಖ್ಯೆಯ ಆಧಾರದ ಮೇಲೆ ನನ್ನನ್ನು ಆಯ್ಕೆ ಮಾಡಿದ್ದೀರಿ. ಮಾನ್ಯ ಯಡಿಯೂರಪ್ಪನವರು ಒಂದು ಆಪಾದನೆ ಮಾಡಿದಾಗ ನಾನು ಸುಮ್ಮನೆ ಇಲ್ಲಿ ಕುಳಿತುಕೊಂಡರೆ ನನ್ನ ಸಮ್ಮತಿ ಇದೆ ಎಂದು ಆಗುತ್ತದೆ. ನಾಳೆ ಮಾಧ್ಯಮದ ಮೂಲಕವಾಗಿ ರಾಜ್ಯದ ಜನತೆಗೆ ವಿಷಯ ಏನೆಂಬುದು ಸರಿಯಾಗಿ ಗೊತ್ತಾಗಬೇಕು. ಸಂಪೂರ್ಣವಾಗಿ ಸಚಿವಸಂಪುಟದ ಮೇಲೆ ಅವಿಶ್ವಾಸ ನಿರ್ಣಯವನ್ನು ಸಂವಿಧಾನಬದ್ಧವಾಗಿ ಮತ್ತು ನಮ್ಮ ಸದನ ರಚನೆ ಮಾಡಿಕೊಂಡಿರುವ ನಿಯಮಗಳ ಪ್ರಕಾರ ನಾವು ಇಲ್ಲಿ ಮಂಡನೆ ಮಾಡಿದ್ದೇವೆ. ನಮ್ಮ ದೌರ್ಭಾಗ್ಯ; ಇವರು ಸಹಿತ ನಾವು ಮಂಡನೆ ಮಾಡಿರತಕ್ಕಂತಹ ಒಂದು ಅವಿಶ್ವಾಸ ನಿರ್ಣಯಕ್ಕೆ ಸಹಿಯನ್ನು ಹಾಕಿದ್ದಾರೆ; ಸಂತೋಷ ಆದರೆ ಈಗ ಎದ್ದು ನಿಂತು ಇದ್ದಕ್ಕಿದ್ದ ಹಾಗೆ ನೀವು ಸರ್ಕಾರದ ಜೊತೆ ಶಾಮೀಲಾಗುತ್ತಾ ಇದ್ದೀರಿ ಎಂದು ಹೇಳಿ ಯುದ್ಧರಂಗದಿಂದ ಹೇಡಿಗಳು ಓಡಿ ಹೋಗುವ ಹಾಗೆ ಓಡಿ ಹೋಗತಕ್ಕ ಕೆಲಸವನ್ನು ಯಡಿಯೂರಪ್ಪನವರು ಮಾಡುತ್ತಿದ್ದಾರೆ. ಕಾಂಗ್ರೆಸ್ ಜೊತೆ ಶಾಮೀಲಾಗತಕ್ಕಂಥ ಪ್ರಶ್ನೆ ಇಲ್ಲಿಲ್ಲ. ದೇಶದ ಐಕ್ಯತೆ ಮತ್ತು ಸಮಗ್ರತೆ ಕಾಪಾಡುವ ದೃಷ್ಟಿಯಿಂದಾಗಿ ಒಂದೇ ಒಂದು ವಿಷಯದಲ್ಲಿ ಸಮಾಜವಾದಿ ತತ್ವಕ್ಕನುಗುಣವಾಗಿರತಕ್ಕಂಥ ವಿಚಾರಗಳನ್ನು ಬಿಟ್ಟರೆ, ಬಾಕಿ ಯಾವುದೇ ದೃಷ್ಟಿಯಲ್ಲೂ ಸಹಿತ ಕಾಂಗ್ರೆಸ್ ಜೊತೆ ಶಾಮೀಲಾಗುವ ಪರಿಸ್ಥಿತಿ ಬರುವುದಿಲ್ಲ. ನಮ್ಮ ನಾಯಕರಾಗಿರುವ ಮಾನ್ಯ ದೇಶಪಾಂಡೆಯವರು ನೆನ್ನೆ ಅತ್ಯಂತ ಕಟುವಾಗಿ ಸರ್ಕಾರವನ್ನು ಮತ್ತು ಈ ಸಭಾನಾಯಕರನ್ನು ಟೀಕೆ ಮಾಡಿದ್ದಾರೆ. ಇಂತಹ ಸಂದರ್ಭದಲ್ಲಿ ಕೇವಲ ರಾಜಕೀಯಕ್ಕೋಸ್ಕರ ಇವರು ಈ ರೀತಿ ಮಾತನಾಡುತ್ತಿದ್ದಾರೆ ಇವರಿಗೆ ಏನೆಂದರೆ ಕಾಂಗ್ರೆಸ್, ಜನತಾದಳ, ಸೆಕ್ಯುಲರ್ ಪಾರ್ಟೀಸ್ ಹೊರಟು ಹೋಗಿ ಬಿಡಬೇಕು. ಇವರು ಏನಾದರೂ ಮಾಡಿ ಗುಮ್ಮನ ಹಾಗೆ ಅಧಿಕಾರಕ್ಕೆ ಬಂದು ಕುಳಿತುಕೊಳ್ಳಬೇಕು ಅದೇ ಇವರಿಗೆ ಬೇಕಾಗಿರುವಂಥದ್ದು, ನಾಳೆ ನಿಮಗೂ ರೈತ ಸಂಘದವರಿಗೂ ಇದೇ ಮಾಡುತ್ತಾರೆ.

ಪ್ರೊ.ಎಂ.ಡಿ. ನಂಜುಂಡಸ್ವಾಮಿ :- ನೀವು ನಮ್ಮನ್ನು ಏತಕ್ಕೆ ಆವರ ಜೊತೆಯಲ್ಲಿ ಸೇರಿಸುತ್ತೀರಿ? ನೀವು ಅವರ ಜೊತೆ ಶಾಮೀಲಾಗಿದ್ದೀರಿ ಎಂದು ಇವರು ಆರೋಪ ಮಾಡಿರಬಹುದು. ನಾನು ನಿಮ್ಮನ್ನು ಕೇಳುತ್ತೇನೆ. ನೀವು ಏಕೆ ಇವರ ಜೊತೆ ಶಾಮೀಲಾಗಿ ಈ ನಿರ್ಣಯ ಮಂಡಿಸಿದಿರಿ ಅಂತ. ಅದಕ್ಕೋಸ್ಕರವೇ ನಾನು ನಿಮ್ಮ ಜೊತೆ ಸೇರದೆ ನಾನು ಪ್ರತ್ಯೇಕವಾಗಿ ನೋಟೀಸ್ ಕಳುಹಿಸಿದ್ದು, ಇವರೂ ಅಪಾಯದವರೇ, ನೀವೂ ಅಪಾಯದವರೇ.

(ಗೊಂದಲ)

ಶ್ರೀ ಪಿ.ಜಿ.ಆರ್ ಸಿಂಧ್ಯ :- ಬಿ.ಜೆ.ಪಿ.ಯವರನ್ನು ಬೆಳೆಸಿದವರೇ ನಾವು; ಈ ಸ್ಥಿತಿಗೆ ಅವರು

ಬರಬೇಕಾದರೆ ಕಾರಣಕರ್ತರೇ ನಾವು. ಅದು ಏನೇ ಇರಲಿ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಏನು ಹೇಳಿದ್ದಾರೆ ಇದನ್ನು ಸ್ಪಷ್ಟವಾಗಿ ಅಲ್ಲಗಳೆಯುತ್ತಿದ್ದೇನೆ. ದಯವಿಟ್ಟು ಈ ರೀತಿಯಲ್ಲಿ ಚೀಪ್ ಪಬ್ಲಿಸಿಟಿಗೋಸ್ಕರ ಇವರು ಪ್ರಯತ್ನ ಮಾಡಬಾರದು ಅವರು ಏನು ಒಂದು ರಾಜಕೀಯ ಪಕ್ಷದ ಅತ್ಯಂತ ಗೌರವಾನ್ವಿತ ಮುಖಂಡರಾಗಿದ್ದಾರೆ ಅದಕ್ಕೆ ತಕ್ಕಂತೆ ನಡೆದುಕೊಳ್ಳುವುದು ಸೂಕ್ತ. ಈಗ ಪ್ರಿಸಿಡೆಂಟ್ ಇದೆ. ಮಾನ್ಯ ಚಂದ್ರೇಗೌಡರು ಅಲ್ಲಿ ಕುಳಿತಿರುವ ಸಂದರ್ಭದಲ್ಲಿ ಇವರು ಅರಬೆರಕೆ ಇದ್ದರು ತಮ್ಮ ಕೆಲಸ ಆಗಬೇಕಾದರೆ ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದರು. ಕೆಲಸಗಳು ಆಗದೇ ಇದ್ದಾಗ ವಿರೋಧ ಪಕ್ಷ ಎಂದು ಹೇಳಿಕೊಳ್ಳುತ್ತಿದ್ದರು. ಆ ಸಂದರ್ಭದಲ್ಲೂ ಸಹಿತ ಬಿ.ಜೆ.ಪಿ. ಅವರು ಸುಮ್ಮನೆ ಕುಳಿತುಕೊಂಡಿದ್ದರು. ಪ್ರಶ್ನೋತ್ತರಕ್ಕೆ ಅವಕಾಶವಿದೆ, ಇದು ಸದಸ್ಯರ ಹಕ್ಕಿನ ಪ್ರಶ್ನೆ. ಮಾನ್ಯ ಅಧ್ಯಕ್ಷರೇ, ನನ್ನ ವೈಯುಕ್ತಿಕ ಅಭಿಪ್ರಾಯದಲ್ಲಿ ಯಾವುದೇ ಸಂದರ್ಭದಲ್ಲೂ ಪ್ರಶ್ನೋತ್ತರಕ್ಕೆ ಅವಕಾಶ ಸಿಗಬೇಕು. ಈಗ ಇಲ್ಲಿ ಇರುವ 224 ಜನ ಸದಸ್ಯರಲ್ಲಿ ಪ್ರತಿಯೊಬ್ಬರೂ ಪ್ರತಿದಿನ ಪ್ರಶ್ನೆ ಕೇಳಲು ಸಾಧ್ಯವಿಲ್ಲ. ನಮ್ಮ ಕ್ಷೇತ್ರದಲ್ಲಿ ನಾವು ಯಾವ ವರ್ಗದ ಜನರನ್ನು ಪ್ರತಿನಿಧಿಸುತ್ತೇವೆ ಅವರು ನಮ್ಮಿಂದ ಏನು ನಿರೀಕ್ಷೆ ಮಾಡುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕು. ನಾವು ಸುಮ್ಮನಿದ್ದರೆ, ಏನು ಇವರು ಮಾತನಾಡಲೇ ಇಲ್ಲ ಎಂದು ಹೇಳುತ್ತಾರೆ.

ಕಷ್ಟಪಟ್ಟುಕೊಂಡು ಲಾಟರಿಯಲ್ಲಿ ಒಂದು ಪ್ರಶ್ನೆ ಬಂದಿರುತ್ತದೆ. ಅದಕ್ಕೂ ಸಹಿತ ಇವರು ನಾಲ್ಕು ಜನ ಸೇರಿಕೊಂಡು ಪ್ರಶ್ನೋತ್ತರ ಬೇಡ ಅಂದರೆ ಹೇಗೆ ಆಗುತ್ತದೆ. ಸದನದ ಒಟ್ಟಾರೆ ಅಭಿಪ್ರಾಯ ತೆಗೆದುಕೊಂಡು ತಾವು ದಯವಿಟ್ಟು ಪ್ರಶ್ನೋತ್ತರಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಪ್ರಶ್ನೋತ್ತರಗಳು : –

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು : –

ಅಧ್ಯಕ್ಷರು : – ಪ್ರಶ್ನೆ ಸಂಖ್ಯೆ 410,638,595 ಈ ಮೂರು ಪ್ರಶ್ನೆಗಳು ಒಂದೇ ವಿಷಯಕ್ಕೆ ಸಂಬಂಧಿಸಿರುವುದರಿಂದ ಎಲ್ಲವನ್ನೂ ಒಂದೇ ಸಾರಿ ತೆಗೆದುಕೊಳ್ಳುತ್ತಿದ್ದೇನೆ.

ದ.ಅ. ವಿಷಯ : – ರಾಸಾಯನಿಕ ಗೊಬ್ಬರಕ್ಕೆ ಸಹಾಯ ಧನ ನೀಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 121 : (410)

ಶ್ರೀ ಡಿ.ಬಿ.ಚಂದ್ರೇಗೌಡ(ತೀರ್ಥಹಳ್ಳಿ) : – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ರಾಜ್ಯ ಸರ್ಕಾರ ರಾಸಾಯನಿಕ ಗೊಬ್ಬರಕ್ಕೆ ಅನುದಾನ ನೀಡುವ ಯೋಜನೆ ಇದೆಯೇ? ಹಾಗಿದ್ದಲ್ಲಿ ಅನುದಾನದ ಪ್ರಮಾಣವೆಷ್ಟು?

2. ಈ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆಯೇ? ಹಾಗಿದ್ದಲ್ಲಿ ಇದು ಯಾವ್ಯಾವ ರೈತರಿಗೆ ಅನ್ವಯವಾಗುವುದು ಯಾವ ವಿಧವಾದ ಗೊಬ್ಬರಗಳಿಗೆ ಎಷ್ಟೆಷ್ಟು ಅನುದಾನವನ್ನು ನೀಡಲು ನಿಗದಿಪಡಿಸಲಾಗಿದೆ.

3. ಈ ನಿಗದಿತ ಪ್ರಮಾಣ ರೈತರಿಗೆ ಬರಲು ಸರ್ಕಾರದವರು ಮಾಡಿರುವ ವ್ಯವಸ್ಥೆ ಏನು?

4. ಈಗಾಗಲೇ ಮುಂಗಾರಿನಲ್ಲಿ ರೈತರು ಬಳಕೆ ಮಾಡಿದ ಬಗ್ಗೆ ಇಂತಹ ಅನುದಾನ ಪಡೆದ